ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2229
ವಿಧಾನ ಪರಿಷತ್ತು ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	18-03-2022

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಛಾವಣಿ ತೋಟಗಾರಿಕೆ ನೀತಿ ಇದೆಯೇ; (ಇದ್ದಲ್ಲಿ, ವಿವರ ಒದಗಿಸುವುದು)	ಇಲ್ಲ No
ಆ)	ಛಾವಣಿ ತೋಟಗಾರಿಕೆ ಮಾಡುವವರಿಗೆ ಯಾವ ರೀತಿಯಲ್ಲಿ ಇಲಾಖೆ ಸಲಹೆ-ಸಹಾಯ ನೀಡುತ್ತಿದೆ; (ವಿವರ ಒದಗಿಸುವುದು)	ಹೌದು. 2019-20 ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ ಘಟಕದಡಿ ನಗರ ಮತ್ತು ಪಟ್ಟಣದ ನೊಂದಾಯಿತ ಸಾರ್ವಜನಿಕರಿಗೆ ಕೈತೋಟ ಮತ್ತು ತಾರಸಿ (ಛಾವಣಿ) ತೋಟಗಳ ಅಭಿವೃದ್ಧಿ ಕುರಿತು ಇಲಾಖಾ ಅಧಿಕಾರಿಗಳು ಹಾಗೂ ವಿಷಯ ತಜ್ಞರ ತಾಂತ್ರಿಕ ನೆರವಿನೊಂದಿಗೆ ಕ್ಷೇತ್ರ ಮಟ್ಟದ ಸಮಗ್ರ ತರಬೇತಿಯನ್ನು ನೀಡಲಾಗಿದೆ. ಸಹಾಯ ರೂಪದಲ್ಲಿ ಬಯೋಮಿಕ್ಸ್, ತರಕಾರಿ ಬೀಜಗಳು, ಸಸಿಗಳು, vegetable special ಗಳನ್ನು ವಿತರಿಸಲಾಗಿದೆ. 2020-21 ನೇ ಸಾಲಿನಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಬಹುತೇಕ ಅನುದಾನವನ್ನು ಕೊವಿಡ್ ಪರಿಹಾರಕ್ಕಾಗಿ ಉಪಯೋಗಿಸಿಕೊಳ್ಳಲಾದುದರಿಂದ ಸಹಾಯ ನೀಡಲಾಗಿರುವುದಿಲ್ಲ, ಆದರೆ, online ಮತ್ತು offline ಮೂಲಕ 123 ಆಸಕ್ತರಿಗೆ ಕೈತೋಟ ಮತ್ತು ತಾರಸಿ (ಛಾವಣಿ) ತೋಟದ ಬಗ್ಗೆ ತರಬೇತಿಯನ್ನು ನೀಡಲಾಗಿದೆ. Yes During 2019-20 field level comprehensive training was given to the registered beneficiaries of the urban areas with the technical assistance of Departmental Officers and Subject Specialists under the component development of Kitchen and Terrace Garden in Comprehensive Horticulture Development Scheme. Biomix, vegetable seeds, seedlings, vegetable special were distributed in kind. As most of the fund under Comprehensive

		Horticulture Development scheme from 2020-21 onwards was utilized for compensation to covid relief, the kind component was not implemented. However, 123 interested persons were given training online and offline.
ಇ)	ನಿತ್ಯೋಪಯೋಗಿ ಔಷಧಿ ಸಸ್ಯಗಳ ಗುಂಪನ್ನು ನಿಗದಿಪಡಿಸಿ, ಸದರಿ ಸಸ್ಯಗಳ ಕುಂಡಗಳನ್ನು ಆಸಕ್ತ ಛಾವಣಿ ತೋಟಗಾರರಿಗೆ ವಿತರಿಸುವ ನೀತಿಯನ್ನು ಸರ್ಕಾರ ರಚಿಸುವುದೇ;	ಅನುದಾನ ಲಭ್ಯತೆ ಮೇರೆಗೆ ಸಸ್ಯಕುಂಡಗಳನ್ನು ಅಭಿವೃದ್ಧಿಪಡಿಸಿ ವಿತರಿಸಲು ಪರಿಶೀಲಿಸಲಾಗುವುದು. Distribution of potted plants will be examined based on the availability of funds.
ಈ	ಪ್ರಸ್ತುತ ಈ ಚಿಂತನೆ ಇಲ್ಲದಿದ್ದಲ್ಲಿ; ಈ ಬಗ್ಗೆ ಸರ್ಕಾರದ ನಿಶ್ಚಿತ ತೀರ್ಮಾನಗಳೇನು;	
ಉ	ಹತ್ತು ಅಥವಾ ಮೀರಿದ ಸಂಖ್ಯೆಯ ಕುಂಡುಗಳನ್ನು ಹೊಂದಿರುವ ಮನೆಗಳಿಗೆ, ಮೈಕ್ರೋ ಹನಿ ನೀರಾವರಿ ಯೋಜನೆಯನ್ನು, ಸದರಿ ಮನೆಗಳಲ್ಲಿ ಉತ್ಪಾದನೆಯಾಗುವ ಹಸಿ ಕಸ ಕೂಡಾ ಬಳಕೆ ಮಾಡುವಂತೆ ಸಮಗ್ರ ಯೋಜನೆಯನ್ನು ರೂಪಿಸಿ ಛಾವಣಿ ತೋಟಗಾರಿಕೆ ಅನುವು ಮಾಡಿಕೊಡುವ ಬಗ್ಗೆ ಸರ್ಕಾರದ ಸ್ಪಷ್ಟ ನೀತಿ ಏನು?	ಇಂತಹ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ. Such proposal is not under the consideration.

HORTI / 199 / HGM / 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು